ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:**886/2024**

ಪಿ.ಡಬ್ಲ್ಯೂ-**1**
ಸಿ.ಡಬ್ಲ್ಯೂ-**1**

ಸಾಕ್ಷಿಗೆ ದಿನಾಂಕ **30-01-2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ಹೆಸರು : ಲಲಿತಮ್ಮ

ಗಂಡನ ಹೆಸರು : ಲೋಕೇಶ

ವಯಸ್ಸು : 50 ವರ್ಷ

ಉದ್ಯೋಗ : ಗೃಹಿಣಿ

ವಾಸಸ್ಥಳ : ಜೋಗಮ್ಮನ ಹಟ್ಟಿ ಗ್ರಾಮ

<u>ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ</u>

ನ್ಯಾಯಾಲಯದ ಮುಂದೆ ಹಾಜರಿರುವ 1 ರಿಂದ 5 ನೇ ಆರೋಪಿತರು ಸಂಬಂಧಿಕರಾಗಬೇಕು. ಚಾಸಾ 2 ರಿಂದ 4 ರವರ ಪರಿಚಯವಿರುತ್ತದೆ.

ನನ್ನ ಮತ್ತು ಆರೋಪಿತರ ನಡುವೆ ಯಾವುದೇ ಜಗಳ ನಡೆದಿಲ್ಲ. ಆರೋಪಿತರು ಅಕ್ರಮ ಕೂಟ ಕಟ್ಟಿ ಕೊಂಡು ಬಂದು ನಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುವುದಿಲ್ಲ. ನನ್ನ ಮೇಲೆ ಯಾವುದೇ ಹಲ್ಲೇ ಮಾಡಿರುವುದಿಲ್ಲ . ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ, ಘಟನೆಗೆ ಸಂಬಂಧಿಸಿದಂತೆ ನಾನು ಪೊಲೀಸರ ಮುಂದೆ ಯಾವುದೇ ದೂರನ್ನು ನೀಡಿರುವುದಿಲ್ಲ.

ಸಾಕ್ಷಿಯು ದೂರನ್ನು ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-01 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-01(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕೃತ್ಯ ಸ್ಥಳ ಪಂಚನಾಮೆ ಮತ್ತು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಪೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 4 ಎಂದು ಗುರುತಿಸಲಾಯಿತು.

ನನ್ನ ಸಮಕ್ಷಮ ಪೊಲೀಸರು ಮಹಜರ್ ಮಾಡಿ ಯಾವುದೇ ಸ್ವತ್ತನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಿಪಿ-1 ರಿಂದ 3 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಿಪಿ-4 ರ ಪೊಟೋ ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಮುಂದುವರೆದ ಹೇಳಿಕೆ ನೀಡಿರುವುದಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯಿತು)**

<u>ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ</u>

ದಿಃ 21.06.2024 ರಂದು ಬೆಳಿಗ್ಗೆ 8.30 ಗಂಟೆ ಸಮಯದಲ್ಲಿ ನಾನು ನನ್ನ ಜಮೀನಿನಲ್ಲಿ ಕೆಲಸ ಮಾಡುವಾಗ ಆರೋಪಿಗಳು ಅಕ್ರಮ ಕೂಟ ಕಟ್ಟಿಕೊಂಡು ಬಂದು ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ . ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ . ನನ್ನ ಬಟ್ಟೆಯನ್ನು ಹಿಡಿದು ಎಳೆದಾಡಿ ಕೈ ಕಾಲುಗಳಿಂದ ಹೊಡೆದರು ಎಂದರೆ ಸರಿಯಲ್ಲ . ಹಗ್ಗದಿಂದ ನನ್ನನ್ನು ಕಟ್ಟಿಹಾಕಲು ಪ್ರಯತ್ನಿಸಿದ್ದು, ಬಂಗಾರದ ಸರವನ್ನು ಹರಿದು ಹಾಕಿದರು ಎಂದರೆ ಸರಿಯಲ್ಲ . ಆರೋಪಿಗಳು ಜಮೀನಿಗೆ ಬಂದರೆ ಜೀವ ತೆಗೆಯುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ . ಆಗ ಅಲ್ಲಿಗೆ ಬಂದ ಚಾಸಾ 4 ರವರು ನನ್ನನ್ನು ಒಂದು ಆಟೋದಲ್ಲಿ ಹೊಸದುರ್ಗ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿ ಚಿಕಿತ್ಸೆ ಕೊಡಿಸಿದರು ಎಂದರೆ ನನಗೆ ಗೊತ್ತಿಲ್ಲ. ಈ ಕುರಿತು ದಿಃ 21.02.2024 ರಂದು ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ .

ದಿನಾಂಕ 22.02.2024 ರಂದು ಪೊಲೀಸರ ಘಟನಾ ಸ್ಥಳಕ್ಕೆ ಬಂದಾಗ ನಾನು ಸ್ಥಳದಲ್ಲಿ ಹಾಜರಿದ್ದು, ಸ್ಥಳ ತೋರಿಸಿದಂತೆ ಚಾಸಾ. 2 ಮತ್ತು 3 ರ ಸಮಕ್ಷಮ ನಿಪಿ-2 ರಂತೆ ಬೆಳಿಗ್ಗೆ 11.00 ರಿಂದ 11.45 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿದರು ಎಂದರೆ ನನಗೆ ಗೊತ್ತಿಲ್ಲ. ಈ ಸಂದರ್ಭದಲ್ಲಿ ನಿಪಿ-3 ರನ್ನು ಸಹ ಬರೆಯಲಾಗಿತ್ತು ಎಂದರೆ ಸರಿಯಲ್ಲ. ಅದೇರೀತಿ ನಿಪಿ-4 ರ ಪೋಟೋ ಸಹ ತೆಗೆಯಲಾಗಿತ್ತು ಎಂದರೆ ಸರಿಯಲ್ಲ . ದಿಃ 22.06.2024 ರಂದು ನಾನು

ಪೊಲೀಸರಿಗೆ ನನ್ನ ಮುಂದುವರೆದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ . ಸಾಕ್ಷಿ ಹೇಳಿಕೆಯನ್ನು ನಿರಾಕರಿಸಿದ ಕಾರಣ ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

ಆರೋಪಿತರು ನಮ್ಮ ಸಂಬಂಧಿಕರು ಎಂದರೆ ಸರಿ. ಆರೋಪಿತರು ನಮ್ಮ ವಿರುದ್ದ ಸಿ ಸಿ ನಂಬರ್ 1084/2023 ರಂತೆ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಆರೋಪಿತರೊಂದಿಗೆ ರಾಜೀಯಾಗಿದ್ದೇನೆಂದರೆ ಸರಿ. ನಿಪಿ-1 ರಂತೆ ದೂರು ನೀಡಿ, ನಿಪಿ-2 ರಂತೆ ಮಹಜರ್ ಕಾಲದಲ್ಲಿ ಹಾಜರಿದ್ದು , ನಿಪಿ-5 ರಂತೆ ಮುಂದುವರೆದ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿಗಳ ಪರ ಶ್ರೀ ಹೆಚ್ ಜಿ ಜಿ ವಕೀಲರಿಂದ

ಆರೋಪಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಏನೂ ಇಲ್ಲ ಎಂದು ಸಲ್ಲಿಸುತ್ತಾರೆ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೆ.ಸರಿ ಇದೆ.

(ಪ್ರಸನ್ನಕುಮಾರ್ ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಹೊಸದುರ್ಗ.